# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

## ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಉಪ ವಿಭಾಗ

## ಕೆಂಪೇಗೌಡ ವಾರ್ಡ್ ನಂ-01ರಲ್ಲಿ ದಿನಾಂಕ: 17-04-2021 ರಂದು ನಡೆದ ಸಮಿತಿ ಸಭಾ ನಡವಳಿ.

ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ.

1. ಶ್ರೀ.ರಜನಿಕಾಂತ್ ಮಲ್ಲಿ, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
2. ಶ್ರೀ.ಮಲ್ಲಿನಾಥ ಮಲ್ಕಾಪುರ, ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿ.
3. ಶ್ರೀ.ವಿವೇಕ್, ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ-01.
4. ಡಾ. ಶಾಲಿನಿ ವೈದ್ಯಾಧಿಕಾರಿಗಳು ಕೊವಿಡ್ (ಎ.ಪಿ.ಟಿ.ಎಸ್)

ವಾರ್ಡ್ ಸಮಿತಿಯ ಪ್ರಸ್ತಾವಿಕ ಸಭೆಯ ಉದ್ದೇಶವನ್ನು ತಿಳಿಸಿ, ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ನಡೆಸಲು ವಾರ್ಡ್ ಸಮಿತಿ ಅಧ್ಯಕ್ಷರನ್ನು ಕೋರಲಾಯಿತು.

| ಕ್ರ.ಸಂ | ವಿಷಯ ಸೂಚಿ | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|
| 01 | ಕೊರೊನಾ ಅಲೆ-2 ವ್ಯಾಪಕವಾಗಿ ಹರಡುತ್ತಿರುವ ಹಿನ್ನಲೆಯಲ್ಲಿ ಸಾರ್ವಜನಿಕರು ಕಡ್ಡಾಯವಾಗಿ ಮಾಸ್ಕ ಹಾಕಲು ಸೂಚಿಸಿದರು | ನೋಡೆಲ್ ಅಧಿಕಾರಿಗಳು ಸಂಬಂದಪಟ್ಟ ಮಾರ್ಷಲ್‌ಗಳಿಗೆ ಸಾರ್ವಜನಿಕ ಸ್ಥಳಗಳಲ್ಲಿ ಮಾಸ್ಕ ಹಾಕದೇ ಇರುವವರಿಗೆ ದಂಡ ವಿಧಿಸಲು ಸೂಚಿಸಿದರು. | ಕಿರಿಯ ಆರೋಗ್ಯ ಪರಿವೀಕ್ಷಕರು ಯಲಹಂಕ ವಲಯ |
| 02 | ಸಾರ್ವಜನಿಕರು ಮೊದಲು ಪರೀಕ್ಷೆ ಮಾಡಿಸಿಕೊಂಡು ನಂತರ ಕೊವಿಡ್ ವ್ಯಾಕ್ಸಿನ್ ಹಾಕಿಸಿಕೊಳ್ಳುವಂತೆ ಸಭೆಯಲ್ಲಿ ಸಾರ್ವಜನಿಕರು ಕೋರಿದರು | ನೋಡೆಲ್ ಅಧಿಕಾರಿಗಳು ಸಂಬಂದಪಟ್ಟ ವೈದ್ಯಾಧಿಕಾರಿಗಳು ಎ.ಪಿ.ಟಿ.ಎಸ್. ರವರಿಗೆ ಪರೀಕ್ಷೆ ಮಾಡಿಸಿ ನಂತರ ಕೊವಿಡ್ ವ್ಯಾಕ್ಸಿನ್ ಹಾಕಿಸಿಕೊಳ್ಳಲು ಸೂಚಿಸುವಂತೆ ಸಭೆಯಲ್ಲಿ ಸೂಚಿಸಿದರು. | ವೈದ್ಯಾಧಿಕಾರಿಗಳು (ಎ.ಪಿ.ಟಿ.ಎಸ್) ವಾರ್ಡ್ ನಂ-01 & 02 |
| 03 | ಯಲಹಂಕ ರೈತರ ಸಂತೆ ಹತ್ತಿರ ಪಾದಚಾರಿ ಮಾರ್ಗದಲ್ಲಿ ಇರುವ ಅಂಗಡಿಗಳನ್ನು ತೆರವುಗೊಳಿಸಲಾಗಿದ್ದು, ಪಾದಚಾರಿ ಮಾರ್ಗಗಳನ್ನು ಪರಿವೀಕ್ಷಣೆ ಮಾಡಿ ಇನ್ನು ಮುಂದೆ ಅಂಗಡಿಗಳನ್ನು ಇಡದಂತೆ ಕ್ರಮ ವಹಿಸಲು ಸಭೆಯಲ್ಲಿ ಸಾರ್ವಜನಿಕರು ಕೋರಿದರು. | ನೋಡೆಲ್ ಅಧಿಕಾರಿಗಳು ಸಂಬಂದಪಟ್ಟ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಪಾದಚಾರಿ ಮಾರ್ಗಗಳಲ್ಲಿ ಇಡುವ ಅಂಗಡಿ ಮಾಲೀಕರಿಗೆ ಸ್ಥಳದಲ್ಲಿ ದಂಡ ವಿಧಿಸಲು ಸೂಚಿಸಿದರು. | ಕಿರಿಯ ಆರೋಗ್ಯ ಪರಿವೀಕ್ಷಕರು ಯಲಹಂಕ ವಲಯ |
| 04 | ಕೊವಿಡ್ ಪರೀಕ್ಷೆ ನಡೆಸಿದ ನಂತರ 24 ಗಂಟೆ ಒಳಗಾಗಿ ಫಲಿತಾಂಶ ಬಂದರೆ ಸೊಂಕಿತ ವ್ಯಕ್ತಿಗೆ ಚಿಕಿತ್ಸೆ ನೀಡಲು ಅನುಕೂಲವಾಗುತ್ತದೆ ಎಂದು ಹಾಗೂ ಬಿ.ಯು. ನಂಬರ್ ಬರುವುದು ತುಂಬಾ ತಡವಾಗುವುದರಿಂದ ಪಾಸಿಟಿವ್ ರೋಗಿಗಳಿಗೆ ಚಿಕಿತ್ಸೆ | ನೋಡೆಲ್ ಅಧಿಕಾರಿಗಳು ಮಾತನಾಡಿ ಬಿ.ಯು.ನಂಬರ್ ತಡವಾಗಿ ಬರುತ್ತಿರುವ ಬಗ್ಗೆ ಮೇಲಾಧಿಕಾರಿಗಳ ಜೊತೆ | ವೈದ್ಯಾಧಿಕಾರಿಗಳು (ಎ.ಪಿ.ಟಿ.ಎಸ್) ವಾರ್ಡ್ ನಂ-01 & 02 |

| | | | |
|---|---|---|---|
| | ನಿಡುವುದರಲ್ಲಿ ತುಂಬ ವಿಳಂಭ ಉಂಟಾಗುತ್ತಿರುತ್ತದೆ ಎಂದು ಸಭೆಯಲ್ಲಿ ಡಾ ಶಾಲಿನಿ ತಿಳಿಸಿದರು. | ಚರ್ಚಿಸುವುದಾಗಿ ತಿಳಿಸಿದರು | |
| 05 | ಎಸ್.ಆರ್.ಎಫ್ ಡಿ ಇರುವ ಸೊಂಕಿತ ರೋಗಿಗಳಿಗೆ ಮೆಡಿಸಿನ್ ನೀಡುತ್ತಿರುವುದಿಲ್ಲ ವೆಂದು ಲಿಂಕ್ ವರ್ಕ್ ರತ್ನ ರವರು ಸಭೆಯಲ್ಲಿ ಕೋರಿದರು | ನೊಡೆಲ್ ಅಧಿಕಾರಿಗಳು ಎಸ್.ಆರ್.ಎಫ್ ಡಿ ಇರುವ ಸೊಂಕಿತ ವ್ಯಕ್ತಿಗಳಿಗೆ ಕೂಡಲೇ ಮೇಡಿಸಿನ್ ಒದಗಿಸುವಂತೆ ಫಾರ್ಮಸಿಯವರಿಗೆ ತಿಳಿಸಲು ಡಾ ಶಾಲಿನಿ ರವರಿಗೆ ತಿಳಿಸಿದರು | ವೈದ್ಯಾಧಿಕಾರಿಗಳು (ಎ.ಪಿ.ಟಿ.ಎಸ್) ವಾರ್ಡ್ ನಂ–01 & 02 |
| 6 | ವೆಂಕಟಾಲ ಎಂಟ್ರೇನ್ಸ್‌ನಲ್ಲಿ ಡಾ. ಬಿರೆದಾರ್ ಹಾಸ್ಪಿಟಲ್ ಮುಂಭಾಗ ಕೆಲವು ಹೊಟೆಲ್ ನವರು ಗಲೀಜು ಮಾಡುತ್ತಿರುವುದಾಗಿ ಸಭೆಯಲ್ಲಿ ಸಾರ್ವಜನಿಕರು ದೂರನ್ನು ಸಲ್ಲಿಸಿದರು | ನೊಡೆಲ್ ಅಧಿಕಾರಿಗಳು ಸಂಬಂದಪಟ್ಟ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸಂಬಂದಿಸಿದ ಹೊಟೆಲ್ ನವರಿಗೆ ತಿಳುವಳಿಕೆ ಪತ್ರ ನೀಡುವಂತೆ ಹಾಗೂ ಟ್ರೆಡ್ ಲೈಸೆನ್ಸ್ ಚೆಕ್ ಮಾಡಲು ತಿಳಿಸಿದರು. | ಕಿರಿಯ ಆರೋಗ್ಯ ಪರಿವೀಕ್ಷಕರು ಯಲಹಂಕ ವಲಯ |
| 7 | ಎ.ಪಿ.ಟಿ.ಎಸ್ ನಲ್ಲಿ ಮೆಡಿಸಿನ್ ಕೊಡುವ ಬದಲು ಯಲಹಂಕ ಸಮುದಾಯ ಭವನದಲ್ಲಿ ಫಾರ್ಮಸಿಯನ್ನು ಸ್ಥಳಾಂತರ ಮಾಡಿ ಯಲಹಂಕ ಒಲ್ಡ್ ಟೌನ್‌ನಲ್ಲಿ ಔಷದಿ ನೀಡಲು ಕ್ರಮ ಕೈಗೊಳ್ಳುವಂತೆ ಸ್ಥಳೀಯ ಅ.ಬ.ಶಿವಕುಮಾರ್ ರವರು ಸಭೆಯಲ್ಲಿ ಕೋರಿದರು | ನೊಡೆಲ್ ಅಧಿಕಾರಿಗಳು ಮಾತನಾಡಿ ಇದರ ಬಗ್ಗೆ ಮೇಲಾಧಿಕಾರಿಗಳ ಜೊತೆ ಚರ್ಚಿಸುವುದಾಗಿ ತಿಳಿಸಿದರು | ವೈದ್ಯಾಧಿಕಾರಿಗಳು (ಎ.ಪಿ.ಟಿ.ಎಸ್) ವಾರ್ಡ್ ನಂ–01 & 02 |

ಮೇಲ್ಕಂಡ ಎಲ್ಲಾ ಅಂಶಗಳಿಗೂ ಕ್ರಮ ಕೈಗೊಳ್ಳಬೇಕಾದ ಎಲ್ಲಾ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಂಡು ಮುಂದಿನ ಸಭೆಗೆ ಪೂರ್ಣ ಮಾಹಿತಿಯೊಂದಿಗೆ ಎಲ್ಲಾ ಅಧಿಕಾರಿಗಳು ಹಾಜರಾಗಲು ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಸೂಚಿಸಿದರು. ಮುಂದಿನ ಸಭೆಯಲ್ಲಿ ಸಾಧಿಸಬೇಕಾದ ಗುರಿ ಹಾಗೂ ಸಾದನೆ ಬಗ್ಗೆ ಚರ್ಚಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ವಂದನಾರ್ಪಣೆಯೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ಕಮಿಟಿ, ವಾರ್ಡ್ ನಂ. 01(ಕೆಂಪೇಗೌಡ)

ವಾರ್ಡ್ ಸಮಿತಿ ಅಧ್ಯಕ್ಷರು
ಹಾಗೂ ವಾರ್ಡ್‌ನ ನೊಡೆಲ್ ಅಧಿಕಾರಿಗಳು
ವಾರ್ಡ್ ಕಮಿಟಿ, ವಾರ್ಡ್ ನಂ. 01(ಕೆಂಪೇಗೌಢ)

**ಪ್ರತಿಯನ್ನು:**

ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರುಗಳ ಮಾಹಿತಿಗಾಗಿ.

1. ಶ್ರೀ.ರಜನಿಕಾಂತ್ ಮಲ್ಲಿ, ಅಧ್ಯಕ್ಷರು ಹಾಗೂ ನೊಡಲ್ ಅಧಿಕಾರಿಗಳು.

ಅಧಿಕಾರಿಗಳ ಮಾಹಿತಿಗಾಗಿ.

1. ಮಾನ್ಯ ಜಂಟಿ ಆಯುಕ್ತರು ಯಲಹಂಕ ವಲಯರವರ ಮಾಹಿತಿಗಾಗಿ.
2. ಮಾನ್ಯ ಮುಖ್ಯ ಅಭಿಯಂತರರು ಯಲಹಂಕ ವಲಯರವರ ಮಾಹಿತಿಗಾಗಿ.
3. ಆರೋಗ್ಯ ವೈದ್ಯಾಧಿಕಾರಿಗಳು ಯಲಹಂಕ ವಲಯರವರ ಮಾಹಿತಿಗಾಗಿ.
4. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ ವಿಭಾಗ ಬಿ.ಬಿ.ಎಂ.ಪಿ ರವರ ಸೂಕ್ತ ಕ್ರಮಕ್ಕಾಗಿ.